ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು)-

ಅ) ಯಾವುದೇ ಪ್ರಸ್ತಾವನೆಯು ಕಂದಾಯ ಇಲಾಖೆಯ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಲಿಪಿಕ ನೌಕರರನ್ನು ಡ್ರಾಯಿಂಗ್ ಕಛೇರಿಗಳಿಗೆ ನೇಮಿಸುವ ಬಗ್ಗೆ.

1578 (209) ಶ್ರೀ ಹೆಚ್. ಎಂ. ರೇವಣ್ಣ(ಮಾಗಡಿ)

ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೇ:-

ಅ) ರಾಜ್ಯದ ಪ್ರತಿ ತಾಲ್ಲೂಕಿನ ಕೆಲವು ಇಲಾಖೆಗಳಿಗೆ ಡ್ರಾಯಿಂಗ್ ಅಧಿಕಾರ ನೀಡಿ 2 ವರ್ಷಗಳಾದರೂ ಲಿಪಿಕ ನೌಕರರನ್ನು ಡ್ರಾಯಿಂಗ್ ಕಛೇರಿಗಳಿಗೆ ನೇಮಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಸರ್ಕಾರವು ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಆತ್ಮಾನಂದ(ತೋಟಗಾರಿಕೆ ರಾಜ್ಯ ಸಚಿವರು)-

ಅ) ಬಂದಿದೆ.

ಆ) ಮಿತವ್ಯಯ ಕ್ರಮಗಳಿಂದಾಗಿ, ಈ ಕಛೇರಿಗಳಿಗೆ ಲಿಪಿಕ ದರ್ಜೆ ಹುದ್ದೆಗಳನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ.

ಉಪಾಧ್ಯಕ್ಷಿಣಿಯವರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ನಿಯಮ 334ರ ಮೇರೆಗೆ

ವಿಷಯ:- **(1) ಹಾಸ್ಟಲ್ ವಿದ್ಯಾರ್ಥಿಗಳಿಗೆ ಊಟ, ತಿಂಡಿ ವಗೈರೆಗೆ ನೀಡುವ ಹಣವನ್ನು ಹೆಚ್ಚಿಸುವ ಬಗ್ಗೆ.**

ಶ್ರೀ ಕೆ. ಹೆಚ್. ಹನುಮೇಗೌಡ(ಹಾಸನ):- ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರ ನಡೆಸುತ್ತಿರುವ ಪದವೀಪೂರ್ವ ಮತ್ತು ಪ್ರೌಢಶಾಲೆಗಳ ಹಾಸ್ಟಲುಗಳ ಪ್ರತಿ ವಿದ್ಯಾರ್ಥಿ ಬಗ್ಗೆ ಊಟ, ತಿಂಡಿ ವಗೈರೆ ಖರ್ಚಿಗೆ ತಿಂಗಳಿಗೆ ಒಂದಕ್ಕೆ 150-00 ರೂ.ಗಳಂತೆ ಕೊಡುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಎಲ್ಲ ಆಹಾರಪದಾರ್ಥಗಳ ಬೆಲೆಯು ವಿಪರೀತ ಏರಿದ್ದು, ಸರ್ಕಾರ ಕೊಡುವ ಹಣ ಸಾಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕೆಲವು ಹಾಸ್ಟಲುಗಳಲ್ಲಿ ಕಾಫಿ, ತಿಂಡಿಯನ್ನು ನಿಲ್ಲಿಸಿ ಬರೇ ಊಟವನ್ನು ಮಾತ್ರ ಕೊಡುತ್ತಿರುವುದಾಗಿ ತಿಳಿಯಿತು. ಹಾಸ್ಟಲು ವಿದ್ಯಾರ್ಥಿಗಳಿಗೆ ಸರಿಯಾಗಿ ಊಟ, ತಿಂಡಿ ಒದಗಿಸಲು ಕನಿಷ್ಠ ಪಕ್ಷ ಪ್ರತಿ ವಿದ್ಯಾರ್ಥಿಗೆ ತಿಂಗಳೊಂದಕ್ಕೆ 75-00 ರೂಪಾಯಿಗಳನ್ನು ಹೆಚ್ಚಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಈ ವಿಚಾರವನ್ನು ಸನ್ಮಾನ್ಯ ಸಮಾಜಕಲ್ಯಾಣ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸುವುದಾಗಿ ತಿಳಿಸುತ್ತೇನೆ.

(2) ಬೆಂಗಳೂರಿಗೆ ಜಯನಗರದಲ್ಲಿರುವ ಬೆಂಗಳೂರು ಮಹಾನಗರ ಪಾಲಿಕೆಯ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರದಲ್ಲಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಶ್ರೀ ರಾಮಲಿಂಗಾರೆಡ್ಡಿ(ಜಯನಗರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಯನಗರದಲ್ಲಿರುವ ಬೆಂಗಳೂರು ಮಹಾನಗರ ಪಾಲಿಕೆಯ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರದಲ್ಲಿ

ಎಲ್ಲಾ ಸೀಟುಗಳೂ ಕಿತ್ತುಹೋಗಿದ್ದು ಇವುಗಳನ್ನು ಬದಲಾಯಿಸಿರುವುದಿಲ್ಲ. ಇದರ ಜೊತೆಗೆ ಈ ಚಿತ್ರಮಂದಿರದಲ್ಲಿ ಹವಾನಿಯಂತ್ರಣ ಸೌಲಭ್ಯವಿಲ್ಲದೆ ಕೇವಲ ಕೆಲವೇ ಫ್ಯಾನುಗಳನ್ನು ಹಾಕಿರುವುದರಿಂದ ಚಲನಚಿತ್ರಮಂದಿರದ ದುರಸ್ತಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿಚಾರವನ್ನು ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.

(3) ಮೂಡಿಗೆರೆ ತಾಲ್ಲೂಕಿನಲ್ಲಿ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ವಹಿಸುವ ಬಗ್ಗೆ.

ಶ್ರೀಮತಿ ಮೋಟಮ್ಮ(ಮೂಡಿಗೆರೆ):- ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮೂಡಿಗೆರೆ ತಾಲ್ಲೂಕಿನ ಬಿ. ಹೊಸಹಳ್ಳಿ ಹಾಗೂ ದಾಸರಹಳ್ಳಿ ಮಂಡಲದ ಊರು ಬಗೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡವನ್ನು ಕಟ್ಟಿ ಎರಡು ವರ್ಷವಾದರೂ ಆರೋಗ್ಯ ಇಲಾಖೆಗೆ ವಹಿಸದೆ, ಅನಾಥವಾಗಿ ನಿಂತಿರುವ ಕಟ್ಟಡವನ್ನು ಜನ ನೋಡಿ, ಏನಾಗಿದೆ ಈ ಕಟ್ಟಡಗಳಿಗೆ ಆಸ್ಪತ್ರೆ ಏಕೆ ನಡೆಸುತ್ತಿಲ್ಲ ಅನ್ನುವ ಹಾಗಾಗಿದೆ. ಇನ್ನೂ ಎಷ್ಟು ವರ್ಷಗಳು ಬೇಕು- ಈ ಹೊಸ ಕಟ್ಟಡಗಳಿಗೆ ಪಿ. ಹೆಚ್. ಸಿ. ಷಿಫ್ಟ ಮಾಡಲು? ಈ ಪಿ. ಹೆಚ್. ಸಿ. ಹೊಸ ಕಟ್ಟಡಗಳ ಯಾವುದೇ ಕೆಲಸ ಬಾಕಿ ಇದ್ದರೆ ಅದಕ್ಕೆ ಕಾರಣವೇನು? ಯಾವ ಕಂಟ್ರಾಕ್ಟರ್ ಎಂದು ತಿಳಿದು ಜಿಲ್ಲಾ ಪರಿಷತ್ತಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿ ಕೂಡಲೇ ಬಿ. ಹೊಸಹಳ್ಳಿ ಹಾಗೂ ಊರುಬಗೆ ಹೊಸ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ತೆಗೆದುಕೊಂಡು ಆಸ್ಪತ್ರೆ ನಡೆಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಬಿ. ಹೊಸಹಳ್ಳಿ ಅಥವಾ ಭಾರತ ಬಯಲು ಎಂಬ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡದ ಕೆಲಸ ಸುಮಾರು ಒಂದು ವರ್ಷದ ಹಿಂದೆ ಅಂದರೆ, ದಿನಾಂಕ 19-3-1991ರಲ್ಲಿ ಮುಗಿದಿರುತ್ತದೆ. ಆದರೆ ಕಟ್ಟಡಕ್ಕೆ ಇಲ್ಲಿಯವರೆಗೆ ವಿದ್ಯುತ್ ಪೂರೈಕೆ ಮಾಡಿರುವುದಿಲ್ಲ. ಈ ಕಟ್ಟಡವು ಗ್ರಾಮಕ್ಕೆ ಸುಮಾರು ಒಂದು ಕಿಲೋ ಮೀಟರ್ ದೂರದಲ್ಲಿ ಇದ್ದು, ಇದರ ವಿದ್ಯುತ್ ಪೂರೈಕೆಗಾಗಿ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ ಹಲವಾರು ಪತ್ರಗಳನ್ನು ಬರೆಯಲಾಗಿದೆ. ಈ ಕಟ್ಟಡಕ್ಕೆ ವಿದ್ಯುತ್ ಪೂರೈಸಲು 5 ವಿದ್ಯುತ್ ಕಂಬಗಳನ್ನು ನೆಡಬೇಕಾಗಿದ್ದು, ಇದಕ್ಕೆ ಹಳ್ಳಿಯ ಕೆಲವು ಜನರು ವಿರೋಧಿಸಿರುತ್ತಾರೆ. ಈ ವಿವಾದ ಬಗೆಹರಿದ ನಂತರ ಕಟ್ಟಡಕ್ಕೆ ವಿದ್ಯುತ್ ಸರಬರಾಜು ಮಾಡಿ, ಕಟ್ಟಡವನ್ನು ಈ ಇಲಾಖೆಯ ವಶಕ್ಕೆ ಕೊಟ್ಟು ಕೂಡಲೇ ಆರೋಗ್ಯ ಘಟಕವನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು.

ಇದೇ ತರಹ ದಾಸರಹಳ್ಳಿ ಮಂಡಲದ ಊರುಬಗೆಯಲ್ಲಿ ಸಹ ಕಟ್ಟಡದ ಕೆಲಸ ಸೆಪ್ಟೆಂಬರ್1991ರಲ್ಲಿ ಮುಗಿದಿರುತ್ತದೆ. ಈ ಕಟ್ಟಡಕ್ಕೂ ಸಹ ವಿದ್ಯುತ್ ಪೂರೈಕೆ ಆಗಿರುವುದಿಲ್ಲ. ಕಟ್ಟಡಕ್ಕೆ ವಿದ್ಯುತ್ ಸರಬರಾಜು ದೊರೆತು ಅದನ್ನು ಇಲಾಖೆಗೆ ವಹಿಸಿಕೊಟ್ಟ ಕೂಡಲೇ ಆರೋಗ್ಯ ಘಟಕವನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು.

(4) ಮಂಗಳೂರು ತಾಲ್ಲೂಕಿನ ಕುಳಾಯಿಯಲ್ಲಿರುವ ನಿರಾಶ್ರಿತ ಮೀನುಗಾರರಿಗೆ ಹಕ್ಕು